1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಯವರ ನ್ಯಾಯಾಲಯ,
ಕುಂದಾಪುರ

ಸಿ.ಸಿ. ನಂಬ್ರ: 1202/2013

ಚಾಸಾ: 22 ಪ್ರಾಸಾ:5

ದಿನಾಂಕ: 03.06.2026

| | | |
|---|---|---|
| ವಾಗ್ಮೂಲದವರ ಹೆಸರು | : | ಶ್ರೀ ಮಂಜುನಾಥ ಬಿ ಕವರಿ |
| ತಂದೆಯ ಹೆಸರು | : | ಬೊಮ್ಮಯ್ಯ ಕವರಿ |
| ವಯಸ್ಸು | : | 63 ವರ್ಷ |
| ಉದ್ಯೋಗ | : | ನಿವೃತ್ತ ಪೊಲೀಸ್ ಉಪಾಧೀಕ್ಷಕರು |
| ವಾಸ ಸ್ಥಳ | : | ಗೋಕರ್ಣ |

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**ಭಾ. ದಂ. ಪ್ರ, ಸಂ, ಕಲಂ 299 ಸಿ ಆರ್ ಪಿ ಸಿ ರಡಿಯಲ್ಲಿ ವಿಚಾರಣೆ: ಮಾನ್ಯ ಸ.ಸ.ಅ.ರವರಿಂದ:**

ನಾನು ದಿ: 06-09-2012 ರಿಂದ 26-09-2013ರವರೆಗೆ ಕುಂದಾಪುರದ ವೃತ್ತ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ: 14-01-2013 ರಂದು ಚಾಸಾ-21 ರವರಿಂದ ಪ್ರಕರಣದ ಕಡತವನ್ನು ಮುಂದಿನ ತನಿಖೆಗಾಗಿ ವಹಿಸಿಕೊಂಡಿರುತ್ತೇನೆ.

ಅದೇ ದಿನ ಸಾಕ್ಷಿದಾರರಾದ ಚಾಸಾ-2 ರಿಂದ 6 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ.

ದಿ: 07-01-2013 ರಂದು ಕೆಎ-20-ಸಿ-4779ನೇ ಟೆಂಪೋ ಚಾಲಕ ಹುಸೇನ್ ಖಾನ್ ಠಾಣೆಗೆ ಹಾಜರಾಗಿದ್ದು, ಪಂಚರಾದ ಚಾಸಾ-10 ರವರ ಸಮಕ್ಷಮ ದಸ್ತಗಿರಿ ಮಾಡಿ ದಸ್ತಗಿರಿ ನಿಯಮವನ್ನು ಪಾಲಿಸಿ ಪೊಲೀಸ್ ಠಾಣಾ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ ಹಾಗೂ ಅವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ನಂತರ ವಾಹನದ ಮಾಲೀಕರಾದ ಚಾಸಾ-11 ರವರಿಗೆ ಕಲಂ 133 ಐಎಂವಿ ಕಾಯಿದೆ ಅಡಿ ನೊಟೀಸು ನೀಡಿರುತ್ತೇನೆ ಹಾಗೂ ಅದೇ ದಿನ ಚಾಸಾ-11 ರವರು ಸದ್ರಿ ನೊಟೀಸಿಗೆ ಉತ್ತರವನ್ನು

ನೀಡಿರುತ್ತಾರೆ ಹಾಗೂ ಅದೇ ದಿನ ಸದ್ರಿ ಟೆಂಪೋ ವಾಹನವನ್ನು ಚಾಸಾ-11 ರವರಿಗೆ ಇಂಡಿಮಿನಿಟಿ ಬಾಂಡು ಪಡೆದು ಬಿಡುಗಡೆ ಮಾಡಿರುತ್ತೇನೆ.

ದಿಃ 11-01-2013 ರಂದು ದ್ವಿ ಚಕ್ರ ವಾಹನ ಸಂಖ್ಯೆ ಕೆಎ-20-ಇಸಿ-0672 ನ್ನು ಇಂಡಿಮಿನಿಟಿ ಬಾಂಡು ಪಡೆದು ಚಾಸಾ-16 ರವರಿಗೆ ಬಿಡುಗಡೆ ಮಾಡಿರುತ್ತೇನೆ.

ದಿಃ 22-02-2013 ರಂದು ಅಪಘಾತದಲ್ಲಿ ಗಾಯಗೊಂಡಿದ್ದ ಚಾಸಾ-2 ರವರ ಗಾಯದ ಪ್ರಮಾಣ ಪತ್ರವನ್ನು ಕುಂದಾಪುರದ ವಿನಯ ಆಸ್ಪತ್ರೆಯಿಂದ ಪಡೆದುಕೊಂಡಿರುತ್ತೇನೆ. ಅದೇ ದಿನ ಮೃತ ಉಮೇಶರವರ ಪಿಎಂ ವರದಿಯನ್ನು ಕುಂದಾಪುರದ ಸರಕಾರಿ ಆಸ್ಪತ್ರೆಯಿಂದ ಪಡೆದುಕೊಂಡಿರುತ್ತೇನೆ. ಅದೇ ದಿನ ಚಾಸಾ-17 ರವರಿಂದ ಅಪಘಾತಕ್ಕೆ ಒಳಗಾದ ವಾಹನಗಳ ತಪಾಸಣೆ ಮಾಡಿಸಿ ಐಎಂವಿ ವರದಿಯನ್ನು ಪಡೆದುಕೊಂಡಿರುತ್ತೇನೆ. ಅದೇ ದಿನ ಗಾಯಾಳು ರಾಘವೇಂದ್ರ-ಚಾಸಾ-2 ರವರ ಪ್ರಥಮ ಚಿಕಿತ್ಸಾ ವರದಿಯನ್ನು ಕೋಟೇಶ್ವರದ ಎನ್ ಆರ್ ಆಚಾರ್ಯ ಆಸ್ಪತ್ರೆಯಿಂದ ಪಡೆದುಕೊಂಡಿರುತ್ತೇನೆ.

ನಂತರ ಅದೇ ದಿನ ತನಿಖೆಯನ್ನು ಪೂರೈಸಿ ಆರೋಪಿಯ ವಿರುದ್ದ ಮಾನ್ಯ ನ್ಯಾಯಾಲಯಕ್ಕೆ ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆ.

ಈಗ ಸಾಕ್ಷಿಗೆ ಕಲಂ 133ರ ಐಎಂವಿ ನೊಟೀಸು, ಉತ್ತರ, 2 ಇಂಡಿಮಿನಿಟಿ ಬಾಂಡುಗಳು, ರಶೀದಿ, ಪಿಎಂ ವರದಿ, ಐಎಂವಿ ವರದಿಗಳನ್ನು ತೋರಿಸಲಾಗಿದ್ದು, ಅದರಲ್ಲಿರುವ ತಮ್ಮ ಸಹಿಗಳನ್ನು ನೋಡಿ ಗುರುತಿಸಿದ ಮೇರೆಗೆ ಸದ್ರಿ ದಾಖಲೆಗಳನ್ನು ಕ್ರಮವಾಗಿ ನಿಪಿ-14 ರಿಂದ 20 ಎಂದು, ಅದರಲ್ಲಿನ ಸಾಕ್ಷಿಯ ಸಹಿಗಳನ್ನು ನಿಪಿ-14(ಎ) ರಿಂದ 20(ಎ) ಎಂದು ಗುರುತಿಸಲಾಯಿತು.

ಈಗ ಸಾಕ್ಷಿಗೆ ಗಾಯದ ಪ್ರಮಾಣ ಪತ್ರವನ್ನು ಹಾಗೂ ಎನ್ ಆರ್ ಆಚಾರ್ಯ ಆಸ್ಪತ್ರೆಯವರು ನೀಡಿದ ವರದಿಯನ್ನು ತೋರಿಸಲಾಗಿ ಅದರಲ್ಲಿರುವ ತಮ್ಮ ಸಹಿಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ-21 ಮತ್ತು 22 ಎಂದು, ಸಾಕ್ಷಿಯ

ಸಹಿಗಳನ್ನು ನಿಪಿ-21(ಎ) ಮತ್ತು ನಿಪಿ-22(ಎ) ಎಂದು ಗುರುತಿಸಲಾಯಿತು. ಆರೋಪಿಯನ್ನು ನೋಡಿದ್ದಲ್ಲಿ ಗುರುತಿಸುತ್ತೇನೆ.

**ಆರೋಪಿ ತಲೆಮರೆಸಿಕೊಂಡಿದ್ದರಿಂದ ವಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು.**

**ಮರು ವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

**1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ. ದ. ನ್ಯಾ. ದಂ. ಕುಂದಾಪುರ**